## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂರವರ ನ್ಯಾಯಾಲಯ, ಚಾಮರಾಜನಗರ.

**ಸಿಸಿ ಸಂಖ್ಯೆ: 631/2015**

**ಫಿರ್ಯಾದಿಃ** **ರಾಜ್ಯದ ಪರವಾಗಿ ಗ್ರಾಮಾಂತರ ಪೊಲೀಸ್ ಠಾಣೆ,**
**ಚಾಮರಾಜನಗರ**

**ವಿರುದ್ಧ**

**ಆರೋಪಿಃ**

1. **ಕೆ.ಸಿ.ಬಸವರಾಜು ,**
   ಬಿನ್ ಲೇಟ್ ಕೆ.ಬಿ.ಚೆನ್ನಬಸಪ್ಪ , 41 ವರ್ಷ,
2. **ಕೆ.ಸಿ.ಕುಮಾರಸ್ವಾಮಿ ,**
   ಬಿನ್ ಲೇಟ್ ಕೆ.ಬಿ.ಚೆನ್ನಬಸಪ್ಪ , 54 ವರ್ಷ,
3. **ಕೆ.ಸಿ.ಪರಶಿವಪ್ಪ , (ಮೃತಪಟ್ಟಿರುತ್ತಾರೆ)**
   ಬಿನ್ ಲೇಟ್ ಕೆ.ಬಿ.ಚೆನ್ನಬಸಪ್ಪ , 46 ವರ್ಷ,
4. **ಕೆ.ಸಿ.ಸೋಮಶೇಖರ ,**
   ಬಿನ್ ಲೇಟ್ ಕೆ.ಬಿ.ಚೆನ್ನಬಸಪ್ಪ , 47 ವರ್ಷ,
   ಎಲ್ಲರ ವಾಸಃ ಕೊತ್ತಲವಾಡಿ ಗ್ರಾಮ ,
   ಚಾಮರಾಜನಗರ ತಾಲ್ಲೂಕು.

### ದಂಡ ಪ್ರಕ್ರಿಯಾ ಸಂಹಿತೆ 313 ರನ್ವಯ ಆರೋಪಿತರ ಹೇಳಿಕೆ

**ಪ್ರಶ್ನೆ:1:** ಈ ಪ್ರಕರಣದಲ್ಲಿ ಅಭಿಯೋಜಕರು ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿ ಅರ್ಥ ಮಾಡಿಕೊಂಡಿದ್ದೀರಾ ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ :2:** ಫ್ರಾಸಾ 1– ಲೋಹಿತ್ ಪಾಟೀಲ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 17.11.2008ರಂದು ತಾನು ನಿಮ್ಮೊಂದಿಗೆ ಮೈನಿಂಗ್ ಸಂಬಂಧವಾಗಿ ಕೊತ್ತಲವಾಡಿ

ಗ್ರಾಮದ ಸರ್ವೆ ನಂ.208ರ ಜಮೀನಿನ 4 ಎಕರೆ 20 ಗುಂಟೆಗೆ ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದು, 2008ರಿಂದ 2012ರವರೆಗೆ ತಾನು ಜಮೀನಿನಲ್ಲಿ ಡೆವಲಪ್ ಮೆಂಟ್ ಕಾರ್ಯ ಮಾಡುತ್ತಿದ್ದಾಗ ಜಮೀನಿನಲ್ಲಿ ಗ್ರಾನೈಟ್ ಕಂಡು ಬಂದಿದ್ದು, ಹಾಗಾಗಿ ನೀವು ತನ್ನಿಂದ 20 ಲಕ್ಷ ಹೆಚ್ಚಿನ ಹಣವನ್ನು ಬೇಡಿಕೆ ಇಟ್ಟಿದ್ದು, ತಾನು ಅಗ್ರಿಮೆಂಟ್ ಸಮಯದಲ್ಲಿ 12 ಲಕ್ಷ ಕೊಟ್ಟಿರುತ್ತೇನೆ ಎಂದು ತನ್ನ ಸಾಕ್ಷ್ಯವನ್ನು ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :3: ಸಾಕ್ಷಿ ಮುಂದುವರಿದು ಅಗ್ರಿಮೆಂಟಿನಲ್ಲಿ ಗ್ರಾನೈಟ್ ಗೆ ಲೈಸೆನ್ಸ್ ಸಿಕ್ಕಿದ ಹತ್ತು ವರ್ಷಗಳ ಕಾಲ ಎಂದು ಕಾಣಿಸಿದ್ದು, ಜಮೀನಿನ ಮಾಲೀಕರಾದ ನೀವು ಆ ಲೈಸೆನ್ಸ್ ಅನ್ನು ಮಾಡಿಸಿಕೊಡಬೇಕಾಗಿದ್ದು, ತಾನು 20 ಲಕ್ಷ ಕೊಡಲಾಗುವುದಿಲ್ಲ ಎಂದು ಹೇಳಿದ್ದಕ್ಕೆ ನೀವು ಯೋಗಿಶ್ ಎಂಬ ವ್ಯಕ್ತಿಯೊಂದಿಗೆ ಸೇರಿಕೊಂಡು ಮತ್ತೊಂದು ಸುಳ್ಳು ಅಗ್ರಿಮೆಂಟನ್ನು ಪ್ರೀ ಡೇಟ್ ಹಾಕಿ ಮಾಡಿಕೊಟ್ಟಿರುತ್ತೀರಾ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ**:4: ಸಾಕ್ಷಿ ಮುಂದುವರಿದು ನೀವು ದಿನಾಂಕ 06.02.2013ರಲ್ಲಿ ತಾನು ನೀಡಿದ 12 ಲಕ್ಷ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೇವೆ ಎಂದು ತನಗೆ ಒಂದು ನೋಟಿಸನ್ನು ಕಳುಹಿಸಿಕೊಟ್ಟಿದ್ದು, ಅದಕ್ಕೆ ತಾನು ದಿನಾಂಕ 12.02.2013ರಂದು ಪ್ರತ್ಯುತ್ತರ ನೋಟಿಸನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :5: ಸಾಕ್ಷಿ ಮುಂದುವರಿದು ಅನಂತರದಲ್ಲಿ ನೀವು ಜಮೀನಿನಲ್ಲಿ ತಾನು ಶೋಧಿಸಿದ ಗ್ರಾನೈಟನ್ನು ಯೋಗಿಶ್ ರವರ ಮೂಲಕ ಬೇರೆಯವರಿಗೆ ಅಕ್ರಮವಾಗಿ ಮಾರಾಟ ಮಾಡುತ್ತಿದ್ದು, ಅಗ್ರಿಮೆಂಟಿನ ಉಲ್ಲಂಘನೆ ಹಾಗೂ ವಂಚನೆ ಸಂಬಂಧವಾಗಿ ನಿಮ್ಮ ಮೇಲೆ ದಿನಾಂಕ 24.08.2013ರಂದು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :6: ಸಾಕ್ಷಿ ಮುಂದುವರಿದು ಪೊಲೀಸಿನವರು ಅನಂತರ ಬಂದು ಆ ಬಗ್ಗೆ ಸ್ಥಳ ಪಂಚನಾಮೆ ಮಾಡಿರುತ್ತಾರೆ. ತಾನು ದೂರು ನೀಡುವಾಗ ಯೋಗೇಶ್ ಕುಮಾರ್ ರವರು ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುವ ಬಗ್ಗೆ ತಿಳಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :7: ಫ್ರಾಸಾ 5 ಸ್ನೇಹರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ದಿನಾಂಕ 24.08.2013ರಂದು ಸಂಜೆ 7.10 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ಗಣಕೀಕೃತ ದೂರನ್ನು ನೀಡಿದ್ದು, ಸದರಿ ದೂರಿನನ್ವಯ ಮೊಕದ್ದಮೆ ಸಂಖ್ಯೆ 199/2013ರಂತೆ ಪ್ರಕರಣ ದಾಖಲಿಸಿ, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿದ್ದು, ನಂತರ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಿ.ಎಸ್.ಐ.ಸಂತೋಷ್ ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :8: ಫ್ರಾಸಾ 6 ನಿರಂಜನ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2008ರಲ್ಲಿ ನಿಮಗೂ ಚಾಸಾ 1 ರವರಿಗೂ ನಿಮ್ಮ ಜಮೀನಿಗೆ ಸಂಬಂಧಪಟ್ಟಂತೆ ಕರಿಕಲ್ಲು ಗಣಿಗಾರಿಕೆ ನಡೆಸಲು ರೂ.10,00,000/–ಕ್ಕೆ ಕರಾರು ಆಗಿದ್ದು, ನೀವು ಸದರಿ ಕರಾರಿನಲ್ಲಿ ಹೇಳಿದಂತೆ ಲೈಸೆನ್ಸ್ ಮಾಡಿಕೊಟ್ಟಿಲ್ಲ, ನಂತರ ತನಗೆ ನೀವು 2007ರಲ್ಲಿ ಚಾಸಾ 4 ರವರಿಗೆ ಗಣಿಗಾರಿಕೆ ನಡೆಸಲು ಕರಾರು ಬರೆದುಕೊಟ್ಟ ಬಗ್ಗೆ ತಿಳಿದು ಬಂದಿದ್ದು, ಅದರಿಂದ ಚಾಸಾ 1 ರವರಿಗೆ ಆರ್ಥಿಕ ನಷ್ಟ ಉಂಟಾಗಿದ್ದು, 2008ರಲ್ಲಿ ತನ್ನ ಸಮಕ್ಷಮ ನಿಪಿ 3 ರಂತೆ ಕರಾರು ಬರೆಯಲಾಗಿದ್ದು, ಅದಕ್ಕೆ ತಾನು ಸಹಿ ಮಾಡಿರುತ್ತೇನೆ ಎಂದು ನುಡಿದಿದ್ದು, ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :9: ಫ್ರಾಸಾ 7ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಮ್ಮೊಂದಿಗೆ ತಾನು ಕರಿಕಲ್ಲು ಗಣಿಗಾರಿಕೆಗಾಗಿ ನಿಮ್ಮ ಜಮೀನನ್ನು ಕರಾರಿನ ಮೂಲಕ ಪಡೆದುಕೊಂಡಿದ್ದು, ಜನವರಿ ಅಥವಾ ಫೆಬ್ರವರಿ 2008ರಲ್ಲಿ ಸದರಿ ಕರಾರನ್ನು ರದ್ದು ಪಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :10: ಸಾಕ್ಷಿ ಮುಂದುವರಿದು ನೀವು ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆದು ಆದೇಶವನ್ನು ನೀಡುತ್ತೇವೆ ಎಂದು ಹೇಳಿದ್ದು, ಸದರಿ ಆದೇಶ ಪಡೆಯಲು ಕಾನೂನಿನಲ್ಲಿ ತೊಡಕುಗಳಿದ್ದ ಕಾರಣ ಕರಾರಿನ ಸಮಯದಲ್ಲಿ ನೀಡಿದ್ದ ರೂ.10,00,000/–ಗಳನ್ನು ಮರಳಿ ಪಡೆದು, ತಾವೇ ಕರಾರನ್ನು ರದ್ದು ಪಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ**:11: ಪ್ರಾಸಾ ಎಸ್.ಎನ್.ಶ್ರೀಕಾಂತ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 19.09.2013ರಂದು ಕಡತ ಪಡೆದುಕೊಂಡು ತನಿಖೆ ಮುಂದುವರಿಸಿ, ದಿನಾಂಕ 22.09.2013ರಂದು ಕೃತ್ಯ ಸ್ಥಳವಾದ ಕೊತ್ತಲವಾಡಿ ಗ್ರಾಮದ ಶ್ರೀಚನ್ನಬಸಪ್ಪರವರಿಗೆ ಸೇರಿದ ಸರ್ವೆ ನಂ.208ರ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ 5 ಮತ್ತು 6 ರವರ ಸಮಕ್ಷಮ ಸಂಜೆ 4.00 ರಿಂದ 4.45ರವರೆಗೆ ನಿಪಿ 2 ರಂತೆ ಮಹಜರ್ ಮಾಡಿದ್ದು, ಅದೇ ದಿನ ಚಾಸಾ 1 ರಿಂದ 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :12: ಸಾಕ್ಷಿ ಮುಂದುವರಿದು ದಿನಾಂಕ 22.10.2023ರಂದು ನೀವು ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು, ನಿಮ್ಮ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ, ನಿಮ್ಮನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು, ಅದೇ ದಿನ ಚಾಸಾ 4 ರವರ ಹೇಳಿಕೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ**:13: ಸಾಕ್ಷಿ ಮುಂದುವರಿದು ದಿನಾಂಕ 22.05.2014ರಂದು ಕೃತ್ಯ ಸ್ಥಳದ ಆರ್.ಟಿ.ಸಿ ಮತ್ತು ಮ್ಯುಟೇಷನ್ ಪಡೆದುಕೊಂಡು ಕಡತಕ್ಕೆ ಅಳವಡಿಸಿ, ಆರ್.ಟಿ.ಸಿ.ಯಲ್ಲಿ 1ನೇ ಆರೋಪಿಯಾದ ನಿಮ್ಮ ಹೆಸರು ಇರುವುದು ಖಚಿತಪಡಿಸಿಕೊಂಡು, ಅದೇ ದಿನ ನಿಪಿ 3 ಮತ್ತು 4ನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡು, ದಿನಾಂಕ 23.05.2014ರಂದು ತನಿಖೆ ಪೂರ್ಣಗೊಂಡಿದ್ದರಿಂದ ನಿಮ್ಮ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :14: ನೀವು ಈ ಪ್ರಕರಣದ ಬಗ್ಗೆ ಇನ್ನೇನಾದರೂ ಹೆಚ್ಚಿನ ವಿಷಯಗಳನ್ನು ಹೇಳಲು ಬಯಸುವಿರಾ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

**ಪ್ರಶ್ನೆ** :15: ನೀವು ನಿಮ್ಮ ಪರವಾದ ಯಾವುದಾದರೂ ಸಾಕ್ಷ್ಯವನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸುತ್ತೀರಾ ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**4ನೇ ಆರೋಪಿಯ ಉತ್ತರಃ**

(ನನ್ನ ಸಮಕ್ಷಮದಲ್ಲಿ ಆರೋಪಿಯ ವಿಚಾರಣೆಯನ್ನು ನಡೆಸಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥವತ್ತಾಗಿ ಮತ್ತು ಸಂಪೂರ್ಣವಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢಪಡಿಸುತ್ತೇನೆ.)
(ದಿನಾಂಕಃ 04.12.2025ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗಳ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಚಾಮರಾಜನಗರ.